

ಎಡದಿಂದ ಬಲಕ್ಕೆ:
1. ಭೀಮನ ಬಗೆಗೆ ಆತನದು ಇದೇ ಅಭಿಪ್ರಾಯ (4)
3. ಸಫಲವಾಯಿತು, ಸ್ನೇಹದ ಮಾತುಕತೆ (3)
4. ರಂಜಿಸುತ್ತಲೇ ಪ್ರಕಾಶಿಸು (3)
6. ಕೈಯಲ್ಲೇ ಕಂದಾಯ, ತುಂಬ ಹೊರೆಯಾಯಿತು (4)
7. ಭರಣಿಯ ಮನದಲ್ಲಿ ಸದಾ ಸಾಲದ್ದೇ ಹೆದರಿಕೆ (4)
9. ಮರೆಯುವಂತಿಲ್ಲ ಬಿಡಿ, 'ಪವಿತ್ರ ಬೆಟ್ಟ' (4)
12. ವಿಮಾನವೆಂದರೇ ಅಬ್ಬ! ಎಂಥ ಹೆಮ್ಮೆ (4)
14. ಮರೆತು ನಡೆದದ್ದರಿಂದ ಒಡೆದಿದ್ದು (3)
15. ಈ ಕಾಲುವೆಗೆ ಬೇಕೇ ಬೇಕು ಕಾಯುವ ಕೆಲಸ (3)
16. ಅಮೂಲ್ಯ ಮಣಿ ಆಕರ ಸಾಗರ (4)

ಮೇಲಿಂದ ಕೆಳಕ್ಕೆ:
1. ಅಪ್ಪಪ್ಪಾ! ಎಷ್ಟು ಶ್ರುತಿ ಸೇರದ ಧ್ವನಿ ಕೇಳಿದಿರಾ? (4)
2. ತರುವವರಿಗೆ ಇಲ್ಲಿ ವಸ್ತುಗಳು ಬಗೆ ಬಗೆ (4)
3. ಕಾತರಿಸಿ ಪಡೆದದ್ದು ಇದೇ ಉಪಚಾರ (3)
5. ಅದನ್ನು ಬೆಳೆಸುವುದು ಕಿಂಚಿತ್ತೂ ಕಷ್ಟ ಇಲ್ಲ (3)
6. ಮರೆತಿದ್ದ ಕತ್ತಿ ಕೈಗೇ ಬಂದದ್ದು ಕೈ ಚಳಕ (4)
8. ಅಕ್ಷತೆ ಕೊಡುವಾಗ 'ದೇವತೆಯ ಹಾಡು' (4)
10. ಸುಮಾರು ಎಷ್ಟು ಅದರ ಶುಲ್ಕ? (3)
11. ನೂರು ಸಾವಿರದಷ್ಟು ವ್ಯತ್ಯಾಸ (4)
12. ಹೂಂಕರಿಸುವಂಥ ಸ್ವಾಭಿಮಾನ, ಗರ್ವ (4)
13. ಮೂರು ಸಲ ಮುಟ್ಟಿದೊಡನೆ ಕುಗ್ಗಿದ ಬಣ್ಣ (3)

## ಪದಬಂಧ: 3-6-2010ರ ಉತ್ತರಗಳು

ಎಡದಿಂದ ಬಲಕ್ಕೆ:
1. ಅಭಿನಯ; 3. ವಿನಾಶ; 4. ವಸನ; 6. ನಗದಾನ; 7. ಹನನ; 9. ಕುಸುಮ; 11. ರುಮಾಲು; 13. ಕದನ; 15. ಅಂಗೀಕಾರ; 17. ಕಟಕಿ; 18. ಸೀಮಿತ; 19. ತಳಹದಿ.

ಮೇಲಿಂದ ಕೆಳಕ್ಕೆ:
1. ಅಶನ; 2. ಯವನ; 3. ವಿಧಾನ; 5. ನನಸು; 7. ಹಸಿರು; 8. ನವಿಲು; 9. ಕುಹಕ; 10. ಮದನ; 12. ಮಾಲೀಕ; 14. ದಲಿತ; 15. ಅಂಕಿತ; 16. ರಸೀದಿ.

# ಪರ್ವತ-ಅದ್ಭುತ

## 'ಆ್ಯಂಡಿಸ್' - ಏನು ವಿಶೇಷ?

'ಆ್ಯಂಡಿಸ್'-ಅದೊಂದು ಪರ್ವತ ಪಂಕ್ತಿ. ದಕ್ಷಿಣ ಅಮೆರಿಕ ಖಂಡದ ಪಶ್ಚಿಮ ಕರಾವಳಿಯ ಉದ್ದಕ್ಕೂ, ಉತ್ತರದ ಅಂಚಿನಿಂದ ದಕ್ಷಿಣದ ತುದಿವರೆಗೆ 'ಬೆನ್ನು ಹುರಿ'ಯಂತೆ ಉಬ್ಬಿನಿಂತಿರುವ ಈ ಪರ್ವತ ಶ್ರೇಣಿಯ ವಿಶೇಷಗಳು ಹಲವಾರು, ಹತ್ತಾರು. ಈಗ್ಗೆ ಅರವತ್ತೈದು ದಶಲಕ್ಷ ವರ್ಷ ಹಿಂದೆ ಏಷಿಯದ ಹಿಮಾಲಯ, ಯೂರೋಪ್‌ನ ಆಲ್ಪ್ಸ್ ಮತ್ತು ಉತ್ತರ ಅಮೆರಿಕದ ರಾಖೀಸ್ ಪರ್ವತಸ್ತೋಮಗಳ ಜೊತೆ ಜೊತೆಗೇ ಜನಿಸಿ, ಈಗ್ಗೆ ಹತ್ತು ದಶಲಕ್ಷ ವರ್ಷ ಹಿಂದಿನ ಸುಮಾರಿಗೆ ಪ್ರಸ್ತುತದ ಔನ್ನತ್ಯ ಗಳಿಸಿ ನಿಂತಿರುವ ಆ್ಯಂಡಿಸ್‌ನ ಪ್ರಮುಖ ವೈಶಿಷ್ಟ್ಯಗಳು ಇವು:

* ಇದು ಧರೆಯ ಅತ್ಯಂತ ಉದ್ದದ ಪರ್ವತ ಪಂಕ್ತಿ. ಆ್ಯಂಡಿಸ್‌ನ ಉದ್ದ ಏಳು ಸಾವಿರದ ಇನ್ನೂರ ಐವತ್ತು ಕಿ.ಮೀ. (ಎಂದರೆ ಹಿಮಾಲಯದ ಸಮೀಪ ಇಮ್ಮಡಿ ಉದ್ದ). ಆ್ಯಂಡಿಸ್ 'ದಪ್ಪ'ವೂ ಕಡಿಮೆ ಏನಿಲ್ಲ: ಒಂದು ನೂರು ಕಿ.ಮೀ.ನಿಂದ ಏಳು ನೂರು ಕಿ.ಮೀ.

* ಔನ್ನತ್ಯದಲ್ಲಿ ಆ್ಯಂಡಿಸ್ ಹಿಮಾಲಯದಷ್ಟಿಲ್ಲ. ಆ್ಯಂಡಿಸ್‌ನಲ್ಲಿ ಹೇರಳ ಶಿಖರಗಳಿವೆ. ಆದರೆ ಇಪ್ಪತ್ತೂರು ಸಾವಿರ ಅಡಿ ಮೀರಿದ ಶಿಖರಗಳು ಕೇವಲ ಎರಡು: 'ಓಜೋಸ್-ಡೆಲ್-ಸಲಾಡಾ (23241 ಅಡಿ) ಮತ್ತು



ಅಕೋಂಗುವಾ (22835 ಅಡಿ)'. ಹಿಮಾಲಯದಲ್ಲಿ ಇಪ್ಪತ್ನಾಲ್ಕು ಸಾವಿರ ಅಡಿ ಮೀರಿದ ತೊಂಬತ್ತಾರು ಶಿಖರಗಳಿವೆ.

* ವಿಶ್ವ ವಿಖ್ಯಾತ 'ಅಮೆಜಾನ್' ನದಿಯೂ ಸೇರಿದಂತೆ ದಕ್ಷಿಣ ಅಮೆರಿಕದ ಹಲವಾರು ಭಾರೀ ನದಿಗಳ ಜನ್ಮ ಮೂಲ ಈ ಪರ್ವತವೇ.

* ಜಗತ್ತಿನ ಅತ್ಯಂತ ಎತ್ತರದ ಸರೋವರ 'ಟಿಟಿಕಾಕಾ' ಆ್ಯಂಡಿಸ್‌ನಲ್ಲಿದೆ. ಸಾಗರ ಮಟ್ಟದಿಂದ 12516 ಅಡಿ ಎತ್ತರದಲ್ಲಿರುವ ಈ ಸರೋವರದ ವಿಸ್ತಾರ 8772 ಚದರ ಕಿ.ಮೀ. 923 ಅಡಿ ಗರಿಷ್ಠ ಆಳದ ಈ ಸರೋವರ ನೌಕಾಯಾನಕ್ಕೂ ಯೋಗ್ಯವಾಗಿದೆ. ದಕ್ಷಿಣ ಅಮೆರಿಕ ಖಂಡದ ಅತ್ಯಂತ ವಿಶಾಲ ಸಿಹಿನೀರಿನ ಸರೋವರವೂ ಇದೇ.

* ದಕ್ಷಿಣ ಅಮೆರಿಕದ ಪಶ್ಚಿಮದ ಅಂಚಿನಲ್ಲಿ, ಆ್ಯಂಡಿಸ್ ನೆರಳಿನಲ್ಲಿ ಧರೆಯ ಅತ್ಯಂತ ಶುಷ್ಕ ಮರುಭೂಮಿ 'ಅಟಕಾಮ' ಮೈದಳೆದಿದೆ. ವರ್ಷಕ್ಕೆ ಸರಾಸರಿ ಅರ್ಧ ಅಂಗುಲದಷ್ಟೇ ಮಳೆ ಪಡೆವ ಈ ಮರುಭೂಮಿಯಲ್ಲಿ ಒಮ್ಮೆಯೂ ಮಳೆ ಬರದೆ ಶತಮಾನಗಳೇ ಕಳೆದಿರುವ ಹೇರಳ ಪ್ರದೇಶಗಳಿವೆ!

* ಆ್ಯಂಡಿಸ್‌ನಲ್ಲಿ ಭೂಕಂಪಗಳು ತುಂಬ ಸಾಮಾನ್ಯ. ಈ ಪರ್ವತ ಪಂಕ್ತಿಯಲ್ಲಿ ಒಂದು ನೂರಾ ಎಂಭತ್ತೂರು ಜೀವಂತ ಜ್ವಾಲಾಮುಖಿಗಳಿವೆ. ಇಲ್ಲಿ ಭಾರೀ ಪ್ರಮಾಣದ ಚಿನ್ನ, ಬೆಳ್ಳಿ, ಪ್ಲಾಟಿನಂ ಮತ್ತು ತಾಮ್ರ ನಿಕ್ಷೇಪಗಳಿವೆ.

* ಧರೆಯ ಅತ್ಯಂತ ಎತ್ತರದ ನಗರ 'ಲಾ ಪಾಜ್' ಆ್ಯಂಡಿಸ್‌ನಲ್ಲೇ ಇದೆ. ಬೊಲಿವಿಯಾ ದೇಶಕ್ಕೆ ಸೇರಿದ ಈ ಜನ ಭರಿತ ನಗರ 11910 ಅಡಿ ಎತ್ತರದಲ್ಲಿದೆ.

■ ಎನ್. ವಾಸುದೇವ್